ಶ್ರೀ ಡಿ. ದೇವರಾಜ ಅರಸ್ :—ಹಿಂದಿನ ಘಟನೆ ಬಗ್ಗೆ ನಾನು ಏನು ಮಾಡಲಿ ? ಬಹುಶಃ ತಾವು ಹೇಳುವುದರಲ್ಲಿ ನಾವು ಗಮನಿಸಬೇಕಾದದ್ದು ಏನೆಂದರೆ ಮುನಿಪಲ್ ಲಿಮಿಟ್ಸ್‌ನಲ್ಲಿ ತಿಂಡಿ ತಿನಸುಗಳನ್ನು ಮಾಡುವುದು, ಇದರ ಬಗ್ಗೆ ಹೆಚ್ಚಾಗಿ ಲಕ್ಷ್ಯ ಕೊಡಬೇಕಾದದ್ದು ಇದೆ.

ಶ್ರೀ ಎಂ ಹೆಚ್. ಜಯಪ್ರಕಾಶ್ ನಾರಾಯಣ್ :—ನಾರ್ವತ್ರಿಕವಾಗಿ ಮಾಡತಕ್ಕ ಸವ್ಸಾರಂಭಗಳಿಗೆ ಮಂತ್ರಿಗಳೂ ಹೋಗುತ್ತಾರೆ. ಇಂಥಾದ್ದು ಆದರೆ ಹೆಚ್ಚಿನ ಅನಾಹುತವಾಗುತ್ತದೆ, ಮಂಡ್ಯಾದಲ್ಲಿ ವಿದ್ಯಾರ್ಥಿನಿಯವರು ಸ್ವಲ್ಪ ವಾಂತಿ ಬೇಧಿಯಾಗಿ ಉಳಿದುಕೊಂಡರು. ಇದರಿಂದ ದೇಶಕ್ಕೆ ಕೆಟ್ಟ ಹೆಸರು ಬರುತ್ತದೆ, ಇದರ ಬಗ್ಗೆ ವಿಶೇಷ ಜಾಗ್ರತೆ ತೆಗೆದುಕೊಂಡು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ :—ಸಾಧ್ಯವಾದಷ್ಟೂ ಹೋಟೆಲುಗಳಿಂದ ತಿಂಡಿ ತರಿಸುವುದನ್ನು ತಪ್ಪಿಸುವುದು ಒಳ್ಳೆಯದು.

(*iv*) *re* : *Stoppage of grants of Mahila Samajas*

SMT. DAMAYANTHI BOREGOWDA (Srirangapatna) :—I call the attention of the Minister for Industries and Parliamentary Affairs to the hardship caused due to the stoppage of grants to Mahila Samajas.

SRI S. M. KRISHNA (Minister for Industries and Parliamentary Affairs) :—Sir in reply to the above Calling Attention notice I beg to state as.

I beg to make following statement with reference to the above Calling Attention Notice.

The payment of grants to Home Industries Institutions (Mahila Samajas) is regulated according to the Rules issued under G. O. No. CI 33 DMI 67, dated the 24th November, 1967. Under these Rules, financial assistance to the Mahila Samajas is granted as noted below :—

1. *Maitnenance Grant*: Rs. 1,000-00 to Rs. 1,500-00 per annum depending upon the number of crafts taught.

2. *Equipment Grant* : Up to Rs. 1,000-00 for the purchase of articles of equipment required for the teaching of the crafts.

Building Grant : 50 per cent of the actual cost or Rs. 5,000-00 whichever is less in each case. No grant is sanctioned for acquiring land.

It is not possible for the Department to sanction grants to all the Mahila Samajas that apply, because of paucity of funds. Every year new Mahila Samajas come up in the State. During 1970-71, 106 new institutions were sanctioned financial assistance, as against 239 old ones. Similarly during 1971-72 and 1972-73 the figures are 52 (new) 381 (old) and nil (new) 356 (old) respectively. Even during 73-74, applications from new Samajas have not been considered. It is therefore obvious that if assistance has to be continued indefinitely in respect of Samajas, it will not be possible to give any assistance to new institutions. Therefore, the question whether the Mahila Samajas should be given grant-in-aid only for a limited period so that new institutions also could get some assistance was examined and it was felt that it is not desirable to provide grants to Mahila Samajas indefinitely to the detriment of new institutions. with this end in view, it was considered necessary to amend the Rules in the light of the past experience.

After considering the question in detail, Government amended the rules in Government Order dated the 12th November, 1973, to the effect that only maintenance grant be given to Samajas for 3 to 5 years.

There have been several representations from the Mahila Samajas requesting for payment of grant to them even after the period of five years. As can be seen from what has been stated above, if maintenance grant is to be sanctioned indefinitely then, with the limited funds provided under this head, it may not be possible to assist

(SRI S. M. KRISHNA)

new Samajas. The operation of the amended rules has been kept in abeyance for the current financial year.

Smt. DAMAYANTHI BORE GOWDA: Maintenance of Rs. 1,000-00 to 1,5' 0-00 was given to some of the Samajas. I think only 2 per cent of the Samajas are getting that grant. The building grant is being given once in a time. The equipment grant is being given once in two or three years. All these grants are not at all sufficient to run the Samajas. It is not proper to stop grants. You have stopped the subsistence allowance also. Samajas are the only forum for women to get their grievances redressed and they are the Institutions through which they work for the welfase of the womenfolk. Therefore would you kindly reconsider your decision and see the grants are continued as usual ?

ಶ್ರೀ ಎಸ್. ಎಂ. ಕೃಷ್ಣ :—ಮಾನ್ಯ ಆಧ್ಯಕ್ಷರೇ ನಾವು ಸರ್ಕಾರದ ಉದ್ದೇಶವನ್ನು ಅನ್ಯಥಾ ಭಾವಿಸಬಾರದು. ಏತಕ್ಕೆ ಎಂದು ಹೇಳಿದರೆ ನಾವು ಹೊಸ ಮಹಿಳಾ ಸಮಾಜಗಳನ್ನು ಬೆಳೆಸಲೇಕು. ಯಾವ ಮಹಿಳಾ ಸಮಾಜಗಳು 5 ವರ್ಷದ ವರೆಗೆ ಗ್ರಾಂಟನ್ನು ಪಡೆದು ತಮ್ಮ ಕಾಲ ಮೇಲೆ ತಾವು ನಿಲ್ಲುವಂಥ ಚೈತನ್ಯ ಪಡೆದುಕೊಂಡಿವೆ ಅಂಥ ಸಮಾಜಗಳಿಗೆ ರಕ್ಷಣೆ ಬೇಕಿಲ್ಲ ಎನ್ನುವ ದೃಷ್ಟಿಯಿಂದ, ಹಾಗೂ ಹೊಸ ಸಮಾಜಗಳು ಅವರ ಕಾಲ ಮೇಲೆ ನಿಲ್ಲುವುದಕ್ಕೆ ಚೈತನ್ಯ ಬಾರದಿದ್ದರೆ ಅವುಗಳಿಗೆ ಉತ್ತೇಜನ ಕೊಡಬೇಕು ಎನ್ನುವಂಥ ಘನೋದ್ದೇಶದಿಂದ ಈ ತಿದ್ದುಪಡಿಯನ್ನು ತಂದದ್ದು. ಆದರೆ ಈ ಸದನದಿಂದ ಮತ್ತು ರಾಜ್ಯದ ನಾನಾ ಭಾಗಗಳ ಮಹಿಳಾ ಸಮಾಜಗಳಿಂದ ಬಂದಿರತಕ್ಕ ಒತ್ತಾಯ ಮತ್ತು ಕೇಳಿಕೆಗಳನ್ನು ಗಮನಿಸಿ ಅದರ ಬಗ್ಗೆ ಮತ್ತೆ ಪುನರ್ವಿಮರ್ಶೆಣೆ ಮಾಡಬೇಕೋ ಏನೋ ಎನ್ನತಕ್ಕ ದೃಷ್ಟಿಯಿಂದ ಈ ವರ್ಷದ ಮಟ್ಟಿಗೆ ನಾವು ಆಜ್ಞೆ ತಡೆಗಟ್ಟಿದ್ದೇವೆ.

ಶ್ರೀಮತಿ ದಮಯಂತಿ ಬೋರೇಗೌಡ :—ರಾಜ್ಯದಲ್ಲಿ ಕೆಲವು ಜಿಲ್ಲೆಯೊಳಗೆ ಗ್ರಾಂಟ್ ಇನ್ ಏಡ್ ಕೊಡದಿದ್ದರೆ ಆ ಮಹಿಳಾ ಸಮ್ಯಾಜಗಳು ಅಳಿಸಿ ಹೋಗುತ್ತವೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಇನ್ನೊಂದು ವಿಚಾರ 500ರಿಂದ 1000 ರೂವರೆಗೆ ಗ್ರಾಂಟ್ ಇನ್ ಏಡ್ ಕೊಡುತ್ತಿರುವುದು ಅಷ್ಟೇನು ಹೆಚ್ಚಿನ ದುಡ್ಡು ಅಲ್ಲ. ಮಹಿಳಾ ಸಂಘ ಸಂಸ್ಥೆಗಳನ್ನು ಮಹಿಳೆಯರೇ ಸೇರ್ಸಿ

ಹಿಸಿದ ದುಡ್ಡಿನಲ್ಲಿ ನಡಿಸಿಕೊಂಡು ಬರುತ್ತಿವೆ. ಉಳಿತಾಯದ ಸೋಗಿನಲ್ಲಿ ಮಹಿಳಾ ಸಮಾಜಗಳಿಗೆ ಕೊಡಲಿ ಪೆಟ್ಟು ಹಾಕಬಾರದು.

ಶ್ರೀಮತಿ ವಿಜಯಾ ದೇಸಾಯಿ :—ನಿಮ್ಮ ರೂಲ್ಸಿನ ಪ್ರಕಾರ ಗುಲ್ಬರ್ಗಾದಲ್ಲಿ ಸಿಕ್ಕುವಂಥಾದ್ದು ಒಂದೇ ಒಂದು ಮಹಿಳಾ ಸಮಾಜಕ್ಕೆ, ಈ ರೂಲ್ಸ್ ಬಂದ ಮೇಲೆ ಅದೂ ಸಿಕ್ಕುವುದಿಲ್ಲ. 500 ರೂಪಾಯಿ ಕಡಿಮೆ ಇದೆ. ಈಗ ಕೊಡುತ್ತಿರುವಂತೆ ಇದೇ ರೀತಿ ಅದನ್ನು ಕೊಡಲಿಕ್ಕೆ ಪರ್ಯಾಲೋಚನೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ :— ಯಾವುಯಾವೆದು ಅಳಿಸಿ ಹೋಗುತ್ತದೆ ಎನ್ನುವ ವಿವರ ಇಲ್ಲ. ಅಳಿಸಬೇಕು ಎನ್ನುವುದು ಸರ್ಕಾರದ ದೃಷ್ಟಿ ಅಲ್ಲ. ಹೊಸ ಮಹಿಳಾ ಸಮಾಜಕ್ಕೆ ಅನುಕೂಲ ಮಾಡಿಕೊಡಬೇಕೆನ್ನುವ ದೃಷ್ಟಿಯಿಂದ ಮಾಡಿದೆವು. ಮಾನ್ಯ ಸದಸ್ಯಣೀಯರು ಹೇಳಿದಂತೆ ಕೆಲವು ಲಕ್ಷ ರೂಪಾಯಿಗಳನ್ನು ಮಾತ್ರ ಬಡ್ಜೆಟ್ ಅಂದಾಜಿನಲ್ಲಿ ಒದಗಿಸಿಕೊಡುತ್ತೇವೆ. ಹಣದ ಪೊತ್ತ ಜಾಸ್ತಿ ಆಲ್ಲದಿದ್ದರೂ ಕೂಡ ಹೊಸ ಮಹಿಳಾ ಸಮಾಜಗಳಿಗೆ ಅನುಕೂಲ ಮಾಡಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೆವು. ಮಾನ್ಯ ಸದಸ್ಯರು ಹೇಳಿದ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ. ನಾವು ಆ ತೀರ್ಮಾನವನ್ನು ತೆಗೆದುಕೊಂಡು ಬಹಳ ದಿವಸವಾಗಿದೆ. ಏತಕ್ಕೆಂದರೆ ಮೈಸೂರಿನಲ್ಲಿ ಶ್ರೀಮತಿ ಕುಬ್ಸದ್‌ರವರ ನೇತೃತ್ವದಲ್ಲಿ ದೊಡ್ಡ ಡೆಲಿಗೇಷನ್ ಬಂದು ನನ್ನನ್ನು ಕಂಡಿದ್ದರು ಮತ್ತು ಅರ್ಥ ಮಂತ್ರಿಗಳನ್ನು ಕಂಡಿದ್ದರು, ಆಗಲೇ ನಾವು ಅವರಿಗೆ ಭರವಸೆಯನ್ನು ಕೊಟ್ಟಿದ್ದೆವು. ಈ ವರ್ಷದ ಮಟ್ಟಿಗೆ ಅದನ್ನು ಜಾರಿಗೆ ಕೊಡುವುದಿಲ್ಲ ಎಂದು.

ಶ್ರೀ ಕೋಣಂದೂರು ಲಿಂಗಪ್ಪ :—ಯಾವಾಗ ಬಂದಿದ್ದರು ?

ಶ್ರೀ ಎಸ್. ಎಂ. ಕೃಷ್ಣ :— 4 ವಾರದ ಕೆಳಗೆ ಬಂದಿದ್ದರು ಆಗಲೇ ಭರವಸೆ ಕೊಟ್ಟಿದ್ದೇವೆ.

ಶ್ರೀಮತಿ ದಮಯಂತಿ ಬೋರೇಗೌಡ :– ಸ್ಟೇ ಮಾಡುತ್ತೇವೆಂದು ಹೇಳಿದಿರಿ, ಮಾರ್ಚ್ ಮೊದಲನೆಯ ವಾರ ಕಳೆದು ಹೋಗಿದೆ. ಇನ್ನು ಎರಡು ಮೂರು ದಿವಸದೊಳಗಾಗಿ ಮಹಿಳಾ ಸಮಾಜಕ್ಕೆ ಅದು ತಲುಪುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.